**ಸಾಕ್ಷಿಯನ್ನು ದಿನಾಂಕಃ 29.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ.ಎಸ್.ಎಂ. ವಕೀಲರಿಂದಃ**

ನಾನು ಹೆಚ್.ಡಿ. ಕೋಟೆಯಲ್ಲಿ ವಾಸವಿರುತ್ತೇನೆ. ನನಗೆ ಕನ್ನ ಹಾಗು ಇಂಗ್ಲೀಷ್ ಓದಲು ಹಾಗು ಬರೆಯಲು ಬರುವುದಿಲ್ಲ. ನಾನು ಸಲ್ಲಿಸಿದ ದೂರು ಹಾಗು ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ನಾನು ಚಿಕ್ಕವನಿದ್ದಾಗಿನಿಂದ ವ್ಯವಸಾಯ ಮಾಡಿಕೊಂಡಿರುತ್ತೇನೆ. ನನಗೆ 02 ಎಕರೆ ಜಮೀನು ಇರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಜಮೀನಿನಿಂದ ವಾರ್ಷಿಕ ಸುಮಾರು ರೂ. 30,000/- ರಿಂದ ರೂ. 40,000/- ಆಧಾಯ ಬರುತ್ತದೆ. ಸದರಿ ಜಮೀನಿನ ಕೃಷಿಗೆ ವಾರ್ಷಿಕ ಸುಮಾರು ರೂ. 30,000/- ಖರ್ಚಾಗುತ್ತದೆ. ನನಗೆ ಕೃಷಿಯಿಂದ ವಾರ್ಷಿಕವಾಗಿ ಬರುವ ಆಧಾಯದಿಂದಲೇ ಜೀವನ ನಿರ್ವಹಣೆಯಾಗಬೇಕೆಂದರೆ ಸರಿ. ನನಗೆ ಮದುವೆಯಾಗಿ 1993 ನೇ ಇಸವಿಯಲ್ಲಿ ಮದುವೆಯಾಗಿ 05 ಜನ ಮಕ್ಕಳಿರುತ್ತಾರೆ. ಸದರಿ ಆಧಾಯದಿಂದಲೇ ಸಂಪೂರ್ಣ ಮನೆಯ ನಿರ್ವಹಣೆ ಹಾಗು ಮಕ್ಕಳ ವಿದ್ಯಾಭ್ಯಾಸವೆಲ್ಲಾ ನೋಡಿಕೊಳ್ಳಬೇಕೆಂದರೆ ಸಾಕ್ಷಿಯು ಅದರ ಜೊತೆ ಸಣ್ಣ-ಪುಟ್ಟ ಕೆಲಸ ಮಾಡಿಕೊಂಡಿದ್ದು ಅದರಿಂದಲೂ ಸಹ ಆಧಾಯ ಬರುತ್ತಂದೆಂದು ನುಡಿಯುತ್ತಾರೆ. ಮಕ್ಕಳ ವಿದ್ಯಾಭ್ಯಾಸ ಹಾಗು ದೈನಂದಿನ ಖರ್ಚಿಗೆ ಎಷ್ಟು ಹಣ ಬೇಕಾಗುತ್ತದೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಮಕ್ಕಳಲ್ಲಿ ಇಬ್ಬರಿಗೆ ಮದುವೆ ಮಾಡಿಸಿರುತ್ತೇನೆ. ಸದರಿ ಮದುವೆಗೆ ಸುಮಾರು ರೂ. 1,00,000/- ಖರ್ಚಾಗಿರಬಹುದು. ಸದರಿ ಮದುವೆಗೆ ಯಾವುದೇ ವರೋಪಚಾರ ಕೊಟ್ಟಿರುವುದಿಲ್ಲ. ಆರೋಪಿ ನನಗೆ ಸುಮಾರು 10-15 ವರ್ಷಗಳಿಂದಲೂ ಪರಿಚಿತರು. ಆ ಬಗ್ಗೆ ನನ್ನ ದೂರಿನಲ್ಲಿ ಬರೆಸಿರುವುದಿಲ್ಲ. ಆರೋಪಿಯ ಕುಟುಂಬದವರ ಪರಿಚಯ ಸಹ ಇರುತ್ತದೆ. ಆರೋಪಿಯು ಟೇಲರಿಂಗ್ ಕೆಲಸ ಮಾಡಿಕೊಂಡಿರುತ್ತಾರೆ. ಆರೋಪಿಗೆ ನಾನು ಸಾಲ ನೀಡುವ ಹಿಂದೆ ಅವರು

02–03 ಬಾರಿ ನನ್ನನ್ನು ಭೇಟಯಾಗಿ ಸಾಲದ ಅವಶ್ಯಕತೆ ಇದೆ ಎಂದು ತಿಳಿಸಿರುತ್ತಾರೆ. ಆ ರೀತಿ ಎಷ್ಟು ದಿನಗಳ ಅಂತರದಿಂದ ಬಂದರುತ್ತಾರೆಂದು ನನಗೆ ನೆನಪಿರುವುದಿಲ್ಲ. ಆ ರೀತಿ ಆರೋಪಿ ಮೊದಲಿಗೆ ಭೇಟಿಯಾದಾಗ ಆರೋಪಿ ಬಳಿ ಹಣ ಇರುವುದಿಲ್ಲವೆಂದು ತಿಳಿಸಿರುತ್ತೇನೆ. ಆ ರೀತಿ ಆರೋಪಿಯು ಕೊನೆಯ ಬಾರಿ ಬಂದು ಕೇಳಿಕೊಂಡ ಸುಮಾರು 01 ತಿಂಗಳಲ್ಲಿ ನಾನು ಆರೋಪಿಗೆ ರೂ. 4,00,000/– ಸಾಲ ನೀಡಿರುತ್ತೇನೆ. ಅದು 2022 ನೇ ಇಸವಿಯಾಗಿರುತ್ತದೆ, ಯಾವ ದಿನಾಂಕ ಮತ್ತು ತಿಂಗಳು ಎಂದು ನನಗೆ ನೆನಪಿರುವುದಿಲ್ಲ. ನಾನು ಆರೋಪಿಗೆ ಸಾಲದ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಆರೋಪಿಯು ಯಾವ ಉದ್ದೇಕ್ಕೆ ಸಾಲ ಬೇಕೆಂದು ನನಗೆ ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ ಆದರೆ ಹಣದ ಅವಶ್ಯಕತೆ ಇದೆ ಎಂದು ತಿಳಿಸಿ ಸಾಲ ಪಡೆದಿರುತ್ತಾರೆ. ಆರೋಪಿಯು ಸಾಲ ಪಡೆದ 02 ತಿಂಗಳಲ್ಲಿ ಹಿಂತಿಗಿಸುವುದಾಗಿ ತಿಳಿಸಿದ್ದು ಸದರಿ ಸಾಲಕ್ಕೆ ತಿಂಗಳಿಗೆ ಶೇಕಡಾ ಒಂದೂವರೆಯಿಂದ ಎರಡು ರೂಪಾಯಿ ಬಡ್ಡಿ ನೀಡುವುದಾಗಿ ಒಪ್ಪಿಕೊಂಡಿರುತ್ತಾರೆ. ನಾನು ಆರೋಪಿಗೆ ರೂ. 4,00,000/– ಸಾಲ ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡುವಾಗ ನನ್ನ ಜೊತೆ ನನ್ನ ಹೆಂಡತಿ ಇದ್ದಿದ್ದು ಆರೋಪಿ ಹಾಗು ಅವರ ಗಂಡ ಇದ್ದಿರುತ್ತಾರೆ. ಸದರಿ ವಿಚಾರವನ್ನು ದೂರಿನಲ್ಲಿ ತಿಳಿಸಿರುವುದಿಲ್ಲ. ಸದರಿ ಹಣದ ವ್ಯವಹಾರದ ಸಂಬಂಧ ನಾನು ಆರೋಪಿಯೊಂದಿಗೆ ಯಾವುದೇ ಪತ್ರದ ವ್ಯವಹಾರ ಮಾಡಿಕೊಂಡಿರುವುದಿಲ್ಲ. ನನಗೆ ಅಪಘಾತವಾಗಿದ್ದು ಅದರ ಪರಿಹಾರದಿಂದ ಬಂದ ಹಣದಿಂದ ನಾನು ಆರೋಪಿಗೆ ಸಾಲ ನೀಡಿರುತ್ತೇನೆ. ಆ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿ ವಿಚಾರವನ್ನು ನನ್ನ ದೂರಿನಲ್ಲಿ ಹಾಗು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ನಾನು ಸಾಲ ಕೊಟ್ಟ 02 ತಿಂಗಳ ನಂತರ ಆರೋಪಿಯನ್ನು ಭೇಟಿಯಾಗಿ ಸಾಲದ ಹಣವನ್ನು ಹಿಂತಿರುಗಿಸುವಂತೆ ಕೇಳಿರುತ್ತೇನೆ. ಅದು ಯಾವ ದಿನಾಂಕ ಎಂದು ನನಗೆ ನೆನಪಿರುವುದಿಲ್ಲ. ನಾನು ಆರೋಪಿಯನ್ನು ಆ ರೀತಿ 02 ಬಾರಿ ಭೇಟಿಯಾಗಿದ್ದು

ನಂತರ ಅವರು ನನಗೆ ನಿ.ಪಿ.–1 ಚೆಕ್ ಅನ್ನು ಬರೆದುಕೊಟ್ಟಿರುತ್ತಾರೆ. ಸದರಿ ನಿ.ಪಿ.–1 ರಲ್ಲಿರುವ ಬರವಣಿಗೆಗು ಹಾಗು ಸಹಿಗು ವ್ಯತ್ಯಾಸವಿರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ, ಅದನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಿ.ಪಿ.–1 ಚೆಕ್ ನಲ್ಲಿ ನನ್ನ ಹಾಗು ಆರೋಪಿಯ ಹೆಸರಿರುತ್ತದೆ. ಶಬೀರ್ ಅಹಮ್ಮದ್ ಎಂದರೆ ನನ್ನ ತಂದೆ. ನನ್ನ ಹಾಗು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಹಾಗು ನಾನು ಆರೋಪಿಗೆ ಯಾವುದೇ ರೂ. 4,00,000/– ಸಾಲ ನೀಡಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿಗೆ ನನ್ನಿಂದ ಸಾಲ ಪಡೆಯುವ ಅವಶ್ಯಕತೆಯೇ ಇದ್ದಿರಲಿಲ್ಲವೆಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**